

# ಉಪ್ಪು ನೀರಿನ ಸರೋವರ 'ಲೋನಾರ್'

ಉಲ್ಕಾಪಾತದಿಂದ ರೂಪುಗೊಂಡ ದೇಶದ ಏಕೈಕ ಸರೋವರ ಮಹಾರಾಷ್ಟ್ರದ ಲೋನಾರ್. ಮಂಗಳ ಗ್ರಹದ ಪರಿಸರವನ್ನು ಒಳಗೊಂಡಿದೆ ಎನ್ನುವ ಊಹೆಯ ಜೊತೆಗೆ ಹಲವು ದಂತಕಥೆ, ಐತಿಹ್ಯಗಳ ಕೇಂದ್ರವಾಗಿರುವ ಲೋನಾರ್, ವಿಜ್ಞಾನಿ–ಸಂಶೋಧಕರ ಕುತೂಹಲದ ಕೇಂದ್ರವೂ ಹೌದು.

■ ಚಿತ್ರ–ಲೇಖನ: **ಧರ್ಮಾನಂದ ಶಿರ್ವ**

'ಲೋನಾರ್ ಲೇಕ್' ಉಲ್ಕಾಪಾತದಿಂದ ರೂಪುಗೊಂಡ ಉಪ್ಪುನೀರಿನ ಸರೋವರ. ಇಂಥದೊಂದು ಸರೋವರ ನಮ್ಮ ದೇಶದಲ್ಲಿರುವುದು ಇದೊಂದೇ. ಮಹಾರಾಷ್ಟ್ರ ರಾಜ್ಯದ ಬುಲ್‌ಢಾಣ ಜಿಲ್ಲೆಯಲ್ಲಿರುವ ಲೋನಾರ್ ಎನ್ನುವ ಪಟ್ಟಣದಲ್ಲಿರುವುದರಿಂದ ಅದೇ ಹೆಸರಿನಿಂದ ಗುರುತಿಸಲ್ಪಟ್ಟಿದೆ.

'ಲೋನಾರ್ ಲೇಕ್' ದೈತ್ಯ ಸರೋವರದ ಉಗಮ ಯಾವಾಗ ಆಯಿತು ಎನ್ನುವ ಬಗ್ಗೆ ನಿಖರ ಮಾಹಿತಿ ಇಲ್ಲ. ಈ ಸರೋವರದ ಚರಿತ್ರೆ ಸಾವಿರಾರು ವರ್ಷಗಳಷ್ಟು ಪುರಾತನವಾದುದು ಎಂದು ಸಂಶೋಧನೆಗಳು ಷರಾ ಬರೆದಿವೆ.

ಇಳಿಸಂಜೆಯ ಹೊತ್ತಿನಲ್ಲಿ ನೆಟ್ಟ ನೋಟವೊಂದಕ್ಕೆ ದಕ್ಕದ ಸರೋವರದ ಹರವು ಕ್ಯಾಮೆರಾ ಕಣ್ಣುಗಳಿಗೆ ಕಷ್ಟಪಟ್ಟು ಇಡಿಯಾಗಿ ಸಿಕ್ಕಾಗ ಸಂತಸವಾಯಿತು. ನೀರವತೆಯಲ್ಲಿ ಸರೋವರದ ಎದುರು ನಿಂತ ನನ್ನೊಳಗೆ ಅದರದೇ ಪ್ರತಿಬಿಂಬ.

ಪಕ್ಷಿನೋಟಕ್ಕೆ ಕ್ರಿಕೆಟ್ ಕ್ರೀಡಾಂಗಣದಂತೆ ಕಾಣುವ ಲೋನಾರ್ ಲೇಕ್ ಹಲವಾರು ಕೌತುಕಗಳನ್ನು ತನ್ನೊಡಲಲ್ಲಿ ಬಚ್ಚಿಟ್ಟುಕೊಂಡಿದೆ. ಇಂದಿಗೂ ತನ್ನೆಲ್ಲ ರಹಸ್ಯವನ್ನು ಬಯಲು ಮಾಡದ ಕಾರಣದಿಂದ ದೇಶ–ವಿದೇಶಗಳ ಸಂಶೋಧಕರಿಗೆ ಇದೊಂದು ಗಹನ ವಿಷಯವಾಗಿ ಉಳಿದಿದೆ. 'ನಾಸಾ'ದಂತಹ ಸಂಸ್ಥೆಗಳು ಇದರ ಅಧ್ಯಯನದಲ್ಲಿ ಉತ್ಸುಕತೆ ತೋರಿಸಿವೆ.

## ಲೋನಾರ್ ಲೇಕ್

ಇತಿಹಾಸದ ಪ್ರಕಾರ 1823ರಲ್ಲಿ ಸಿ.ಜಿ. ಅಲೆಗ್ಸಾಂಡರ್ ಎಂಬ ಬ್ರಿಟಿಷ್ ಮಿಲಿಟರಿ ಅಧಿಕಾರಿ ಈ ಸರೋವರವನ್ನು ಕಂಡುಹಿಡಿದ ಎನ್ನುವ ಉಲ್ಲೇಖವಿದೆ. ಈ ಅದ್ಭುತ ಸರೋವರದ ಪ್ರಸ್ತಾಪ ಸ್ಕಂದ ಮತ್ತು ಪದ್ಮ ಪುರಾಣಗಳಲ್ಲಿ ಬಂದಿರುವುದು ಇದರ ಚಾರಿತ್ರಿಕ ಹಾಗೂ ಪೌರಾಣಿಕ ಹಿನ್ನಲೆಯನ್ನು ಸೂಚಿಸುತ್ತದೆ. ಪುರಾಣ ಕಥೆಯೊಂದರ ಪ್ರಕಾರ ಈ ಸರೋವರದಲ್ಲಿ ಲೋನಾಸುರನೆಂಬ ದೈತ್ಯ ವಾಸವಾಗಿದ್ದ. ವಿಷ್ಣುವಿನಿಂದ ಅವನ ಸಂಹಾರ ನಡೆದ ಕಾರಣ ಊರಿಗೂ ಸರೋವರಕ್ಕೂ ಲೋನಾರ್ ಎಂಬ ಹೆಸರು ಬಂತು. ಲೋನಾರ್ ಲೇಕ್ ಸಮೀಪದಲ್ಲೇ ದೈತ್ಯ ಸುದಾನ್ ದೇವಾಲಯವಿದೆ. ಅಲ್ಲಿ ಲೋನಾಸುರನನ್ನು ತನ್ನ ಪದತಳದಲ್ಲಿ ಸಂಹರಿಸುವ